ಪಿ.ಡಬ್ಲ್ಯು-01

**ಸಾಕ್ಷಿಯನ್ನು ದಿನಾಂಕಃ 26.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ. ಹೆಚ್.ವಿ.ಎಸ್. ವಕೀಲರಿಂದಃ**

ನಾನು ಹೊನ್ನಮ್ಮನಕಟ್ಟೆ ಗ್ರಾಮದಲ್ಲಿ ಸುಮಾರು 50 ವರ್ಷಗಳಿಂದ ವಾಸವಿರುತ್ತೇನೆ. ನನ್ನ ತಂದೆಯು ಸಹ ಹೊನ್ನಮ್ಮನಕಟ್ಟೆ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನ ಮುಖ್ಯ ಸಾಕ್ಷ್ಯಪ್ರಮಾಣ ಪತ್ರವನ್ನು ನನ್ನ ಮತ್ತು ಇನ್ನುಳಿದ ವಾದಿಗಳ ಪರವಾಗಿಯೂ ಸಹ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯು ತಮಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ಏನು ದಾಖಲೆಗಳನ್ನು ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಸಾಗುವಳಿ ಚೀಟಿ, ಪಹಣಿ ಪತ್ರಿಕೆ ಮತ್ತು ಮ್ಯುಟೇಷನ್ ರಿಜಿಸ್ಟರ್ ಗಳನ್ನು ಹಾಜರುಮಾಡಿರುತ್ತೇನೆಂದು ನುಡಿಯುತ್ತಾರೆ. ಸಾಗುವಳಿ ಪತ್ರ ಹಾಜರುಮಾಡಿಲ್ಲವೆಂದರೆ ಸಾಕ್ಷಿಯು ಮಂಜೂರಾತಿ ಚೀಟಿ ಕಳೆದು ಹೋಗಿದ್ದು ತಾಲ್ಲೋಕು ದಂಡಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಅವರು ಕೊಟ್ಟ ಹಿಂಬರಹವನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಹಾಜರುಮಾಡಿರುವ ದಾಖಲೆಗಳಲ್ಲಿ ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿರುವ ಬಗ್ಗೆ ಎಲ್ಲೂ ನಮೂದು ಇಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ದೇವಮ್ಮ ಎಂಬುವವರೇ ಸುಮಾರು 70 ವರ್ಷಗಳಿಂದ ಸ್ವಾಧೀನ ಇದ್ದು ಅವರು ಸತ್ತ ನಂತರ ಪ್ರತಿವಾದಿಗಳು ಸ್ವಾಧೀನ ಇರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ತಾವು ಸ್ವಾದೀನ ಇರುತ್ತೇನೆಂದು ಹೇಳಿದ್ದು ಹಾಗಾದರೆ ಈ ವರ್ಷ ಏನು ಬೆಳೆ ಬೆಳೆದಿರುತ್ತೀರಾ ಎಂದರೆ ಸಾಕ್ಷಿಯು ಮೆಕ್ಕೆ ಜೋಳ ಬೆಳೆದಿರುತ್ತೇನೆಂದು

ನುಡಿಯುತ್ತಾರೆ. ಜೋಳ ಬೆಳೆದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಏನಾದರೂ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿಗೆ ಮಂಜೂರಾಗಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಒಂದು ವೇಳೆ ದಾವಾ ಆಸ್ತಿಯು ನನ್ನ ತಂದೆಯ ಹೆಸರಿಗೆ ಮಂಜೂರಾಗಿದ್ದರೆ ಮೂಲ ದಾಖಲೆಗಳನ್ನು ಹಾಜರುಪಡಿಸುತ್ತಿದ್ದಿರಿ ಎಂದರೆ ಸಾಕ್ಷಿಯು ಮೂಲ ಸಾಗುವಳಿ ಪತ್ರವು ಕಳೆದು ಹೋಗಿದ್ದರಿಂದ ತಹಶೀಲ್ದಾರ್, ಹೆಚ್.ಡಿ. ಕೋಟೆಯವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿಲ್ಲದಿದ್ದರು ಸ್ವಾಧೀನ ಇದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ಮತ್ತು ಅವರ ಕುಟುಂಬಸ್ಥರು ಸುಮಾರು 70 ವರ್ಷಗಳಿಂದ ಸ್ವಾಧೀನದಲ್ಲಿದ್ದು ಕೊಂಡು ಬರುತ್ತಿದ್ದರು ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**